ಕಾಟಪಳ್ಳ ಮತ್ತು ಕುಳಾಯಿ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಸೌಲಭ್ಯಗಳು

1239 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಕಾಟಿಪಳ್ಳ ಮತ್ತು ಕುಳಾಯಿ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಸೌಲಭ್ಯ ಒದಗಿಸಲು ಪೂರಕವಾದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ನವ ಮಂಗಳೂರು ಬಂದರು ಮತ್ತು ಎಂ.ಸಿ.ಎಫ್.ನಂತಹ ಪ್ರಮುಖ ಯೋಜನೆಗಳಿಗಾಗಿ ಜಾಗ ತೆರವು ಮಾಡಿರುವ ಮೇಲ್ಕಂಡ ಪ್ರದೇಶದ ಜನರ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ 1988-89, 1989-90 1990-91 (ಜನವರಿ 31) ರವರೆಗೆ ಖರ್ಚು ಮಾಡಿದ ಹಣವೆಷ್ಟು?*

ಇ) *ಮೇಲ್ಕಂಡ ಪ್ರದೇಶಗಳ ಅಭಿವೃದ್ಧಿಗೆ ರೂ. 31 ಲಕ್ಷ ಬಿಡುಗಡೆ ಮಾಡುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು 1989ರಲ್ಲಿಯೇ ಪ್ರಸ್ತಾವನೆ ಕಳಿಸಿದ್ದರೂ ಈವರೆಗೆ ಏಕೆ ಹಣ ಬಿಡುಗಡೆಯಾಗಿರುವುದಿಲ್ಲ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಈ ಅವಧಿಯಲ್ಲಿ ಸರ್ಕಾರದ ವತಿಯಿಂದ ಯಾವ ಹಣವನ್ನು ಖರ್ಚು ಮಾಡಿರುವುದಿಲ್ಲ.

ಇ) ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ಪರಿಗಣಿಸಲಾಗುವುದು.

ಕೊಂಕಣ ರೈಲ್ವೆ ಯೋಜನೆಗೆ ರಾಜ್ಯ ಸರ್ಕಾರ ಮಾಡಲಿರುವ ಖರ್ಚು

1249 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಂಕಣ ರೈಲ್ವೆ ನಿರ್ಮಾಣ ಯೋಜನೆಗಾಗಿ ರಾಜ್ಯ ಸರ್ಕಾರ ಖರ್ಚು ಮಾಡಲಿರುವ ಹಣದ ಮೊತ್ತವೆಷ್ಟು?*

ಆ) *ಈ ಮೊತ್ತದಲ್ಲಿ ಹಣಕಾಸು ರೂಪದ ಸಹಾಯ, ಭೂಸ್ವಾಧೀನ ಮುಂತಾದುವುಗಳಿಗಾಗಿ ಖರ್ಚು ಮಾಡಲಿರುವ ಹಣವೆಷ್ಟು?*

ಇ) *ಕೊಂಕಣ ರೈಲ್ವೆ ಕಾರ್ಪೊರೇಷನ್ ಆಡಳಿತ ಮಂಡಳಿಯಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿ ಯಾರಾಗಿರುತ್ತಾರೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರದ ವತಿಯಿಂದ ಷೇರು ಬಂಡವಾಳವಲ್ಲದೆ ಬೇರೆ ಯಾವ ಹಣವನ್ನು ಖರ್ಚು ಮಾಡುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು

ತಹಶೀಲ್ದಾರ್‌ರವರ ವಸತಿ ಸೌಲಭ್ಯಗಳ ಬಗ್ಗೆ

1250 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) *ರಾಜ್ಯದಲ್ಲಿರುವ ತಹಶೀಲ್ದಾರರವರಿಗೆ ಸರ್ಕಾರಿ ವಸತಿ ಸೌಕರ್ಯವಿರುವವರೆಷ್ಟು? ಹಾಗೂ ಸೌಕರ್ಯವಿಲ್ಲದಿರುವ ತಹಶೀಲ್ದಾರರ ಸಂಖ್ಯೆ ಎಷ್ಟು?*